ಖಾಲಿ ಇರುವ ಹುದ್ದೆಗಳ ಸಂಖ್ಯೆ: 102.

ವಿವರ : ವೈದ್ಯರು ದರ್ಜೆ-1-10

ವೈದ್ಯರು ದರ್ಜೆ-2-98

ಈ) ವೈದ್ಯರು ದರ್ಜೆ-1(ಅ)ದ, 4ಹುದ್ದೆಗಳನ್ನು ಪದೋನ್ನತಿಯಿಂದ ಭರ್ತಿಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ವೈದ್ಯರು ದರ್ಜೆ-2ರ 98 ಖಾಲಿ ಹುದ್ದೆಗಳಲ್ಲಿ 43 ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳಿಂದ ಭರ್ತಿಮಾಡಲು ಹಾಗೂ ಉಳಿದ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿನಗರ ಬಂಗೇರಿಯಲ್ಲಿ ಗ್ರಂಥಾಲಯ ತೆರೆಯುವುದು.

1045(1508)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಧಾರವಾಡ ಜಿಲ್ಲೆಯಲ್ಲಿ ಇರುವ ಗ್ರಂಥಾಲಯಗಳ ಒಟ್ಟು ಸಂಖ್ಯೆ ಎಷ್ಟು:ಅವು ಎಲ್ಲೆಲ್ಲಿ ಇವೆ ? ಇನ್ನು ಅವಶ್ಯಕತೆ ಇರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ ಈ ಗ್ರಂಥಾಲಯಗಳನ್ನು ಎಲ್ಲೆಲ್ಲಿ ತೆರೆಯಲಾಗಿದೆ ಹಾಗೂ ಪ್ರಸಕ್ತ ಇರುವ ಗ್ರಂಥಾಲಯಗಳ ಅಭಿವೃದ್ಧಿಗೆ ಸರ್ಕಾರದ ಯೋಜನೆ ಏನಾದರು ರೂಪಿಸಿದೆಯೇ(ವಿವರ ಒದಗಿಸುವುದು)

ಇ) ಹುಬ್ಬಳ್ಳಿ ನಗರ ಬಂಗೇರಿ ಗ್ರಾಮದಲ್ಲಿ ಗ್ರಂಥಾಲಯದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಎಷ್ಟು ಗ್ರಂಥಾಲಯ ಸ್ಥಾಪಿಸಲು ಸರ್ಕಾರ ಕ್ರಮಕ್ಕೆಗೊಳ್ಳುವುದೇ

ಶ್ರೀ. ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು)

ಅ) ನಗರ ಕೇಂದ್ರ ಗ್ರಂಥಾಲಯ -35 ಶಾಖಾ ಗ್ರಂಥಾಲಯ -08 ವಿವರಗಳ ಪಟ್ಟಿಯನ್ನು ಲಗತ್ತಿಸಿದೆ

ಆ) ಪ್ರತಿ ವರ್ಷ ಹುದ್ದೆಗಳ ಮಂಜೂರಾತಿ ಆಧಾರದ ಮೇಲೆ ನಗರದ ಹೊಸ ಬಡಾವಣೆಗೆ ವಾರ್ಡ್‌ಗೆ ಒಂದರಂತೆ ಗ್ರಂಥಾಲಯಗಳನ್ನು ಪ್ರಾರಂಭಿಸಲು ಯೋಜಿಸಲಾಗಿದೆ. ಹಾಗೂ ಜಿಲ್ಲಾ ಕೇಂದ್ರ ಗ್ರಂಥಾಲಯದ ಅಡಿಯಲ್ಲಿ ತಾಲ್ಲೂಕ ಕೇಂದ್ರ ಪುರಸಭೆ ಮತ್ತು ಗ್ರಾಮ ಪಂಚಾಯ್ತಿ ಕೇಂದ್ರ ಸ್ಥಾನದಲ್ಲಿ ಹಂತ ಹಂತವಾಗಿ ಹಣಕಾಸು ಲಭ್ಯತೆಯನ್ನಾಧರಿಸಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು. ಹಾಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಾಲಯಗಳ ಸೇವೆಯನ್ನು ಆಧುನಿಕರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಹೌದು ಬೆಂಗೇರಿಯಲ್ಲಿ ಗ್ರಂಥಾಲಯ ಪ್ರಾರಂಭಿಸುವ ಬಗ್ಗೆ ಪರಿಗಣಿಸಲಾಗುವುದು

ವಿವರಣಾ ಪಟ್ಟಿ

ನಗರ ಕೇಂದ್ರ ಗ್ರಂಥಾಲಯ	ಶಾಖಾ ಗ್ರಂಥಾಲಯ	ಸೇವಾಕೇಂದ್ರ	ಸಂಚಾರಿ ಗ್ರಂಥಾಲಯ
ಮುಖ್ಯಗ್ರಂಥಾಲಯಾಧಿಕಾರಿಗಳ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಜಿಲ್ಲಾಧಿಕಾರಿ ಆವರಣ, ಹುಬ್ಬಳ್ಳಿ ಧಾರವಾಡ ಧಾರವಾಡ- 580001	1) ನ.ಕೇ.ಗ್ರಂ ಶಾಖೆ ಗರಗಸಿದ್ದಲಿಂಗಪ್ಪ	1) ಗಾಂಧಿ ಪ್ರತಿಷ್ಠಾನ ಹೋಟೇಲ್	ಸಂಚಾರಿಗ್ರಂಥಾಲಯ
	2) ಲಕ್ಷ್ಮೀನಗರ ಶ್ರೀಕೃಷ್ಣ ವಿದ್ಯಾಗಿರಿ.	2) ಬಾಲಾಪರಾಧಿ.	
	3) ಮರುಗಪುರ	3) ನೌಕರರ ಭವನ, ದೊಡ್ಡ ರಸ್ತೆ.	
	4) ದಾಸ್ತಿಕೊಪ್ಪ ಕಟ್ಟಡ	4) ಜಾಂಬವಂತ ನಗರ	
	5) ಸುಳ್ಳದ ಮಲಕಟ್ಟಡ	5) ಪೋಲೀಸ್ ಹೆಡ್ ಕ್ವಾರ್ಟರ್ಸ್	
	6) ಶುಕ್ರವಾರಪೇಟೆ	6) ಗುಲಗಂಜಿಕೊಪ್ಪ	
	7) ಮಾನಸಿಕ ಆಸ್ಪತ್ರೆ, ಧಾರವಾಡ.	7) ಉಪಕಾರಾಗೃಹ ಹುಬ್ಬಳ್ಳಿ.	
	8) ಜಿಲ್ಲಾ ಆಸ್ಪತ್ರೆ, ಧಾರವಾಡ	8) ಚೆಲುವಾದಿ ಓಣಿ, ಹುಬ್ಬಳ್ಳಿ	
	9) ಮೂರುಸಾವಿರ ಮಠ	9) ಸುತಗಟ್ಟೆ, ಹುಬ್ಬಳ್ಳಿ.	
	10) ಇಂದಿರಾ ಗಾಜಿನ ಮನೆ ಆವರಣ, ಹುಬ್ಬಳ್ಳಿ	10) ಹರಿಜನ ಹರಿಶ್ಚಂದ್ರ ಕಾಲೋನಿ ಧಾರವಾಡ.	
	11) ಹಳೇ ಹುಬ್ಬಳ್ಳಿ, ಹುಬ್ಬಳ್ಳಿ	11) ಅವರುಗೋಳ ಹುಬ್ಬಳ್ಳಿ	
	12) ರೈಲ್ವೆ ಕಾಲೋನಿ ಹುಬ್ಬಳ್ಳಿ,	12) ರಾಯಪುರ, ಹುಬ್ಬಳ್ಳಿ	
	13) ಘಂಟಿಗೇರಿ, ಹುಬ್ಬಳ್ಳಿ	13) ಶ್ರೀರಾಮಲಿಂಗೇಶ್ವರ ನಗರ, ಹುಬ್ಬಳ್ಳಿ	
	14) ಕೆ.ಎಂ.ಸಿ.ಆಸ್ಪತ್ರೆ,	14) ಆನಂದನಗರ, ಹಳೇಹುಬ್ಬಳ್ಳಿ	
	15) ಕೋ-ಆಪರೇಟಿವ್ ಆಸ್ಪತ್ರೆ	15) ಹೆಚ್.ಬಿ.ವ್ಯೆ.ಕೆ.ಸಂಘ.	
		16) ಕಾಳಿದಾಸ ವಿದ್ಯಾವರ್ಧಕ ಸೇವಾ ಕೇಂದ್ರ. ಧಾರವಾಡ	
	16) ಸ್ವಾಮಿ ವಿವೇಕಾನಂದರವರ ಮಂಡಳಿ.		
	17) ನವನಗರ ಹಡಗಲಿ ಕಟ್ಟಡ		
	18) ಬೈರದೇವರಕೊಪ್ಪ, ಹುಬ್ಬಳ್ಳಿ		
	19) ನಾಗಶೆಟ್ಟಿಕೊಪ್ಪ ಶ್ವೇತಾಪುರ, ಹುಬ್ಬಳ್ಳಿ.		

ಶಾಖಾ ಗ್ರಂಥಾಲಯಗಳು

ಕ್ರಮಸಂಖ್ಯೆ	ತಾಲ್ಲೂಕು	ಗ್ರಂಥಾಲಯ ಹೆಸರು
1	ಧಾರವಾಡ	1) ಗರಗ
2	ಹುಬ್ಬಳ್ಳಿ	2) ಹೆಬಸೂರು
3	ಕಲಘಟಗಿ	3) ಬ್ಯಾಹಟ್ಟಿ
4	ಕುಂದಗೋಳ	4) ಕಲಘಟಗಿ
5	ನವಲುಗುಂದ	5) ಕುಂದಗೋಳ
		6) ಕಮಡೊಳ್ಳಿ
		7) ನವಲುಗುಂದ
		8) ಅಣ್ಣಿಗೇರಿ.

ವಿಷಯ :- ಹುಬ್ಬಳ್ಳಿ ತಾಲ್ಲೂಕಿನ ಬ್ಯಾಹಟ್ಟಿಗೆ ಪ್ರೌಢಶಾಲೆ ಮಂಜೂರು ಮಾಡುವುದು.

1046(1510)

ಶ್ರೀ ಜಗದೀಶೇ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) ಹುಬ್ಬಳ್ಳಿ ತಾಲ್ಲೂಕಿನ ಬ್ಯಾತಟ್ಟಿ ಗ್ರಾಮ ಜನ ಸಂಖ್ಯೆಯಲ್ಲಿ ದೊಡ್ಡ ಗ್ರಾಮವಿದ್ದು ಅಲ್ಲಿ ಹೈಸ್ಕೂಲಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

(ಆ) ಹಾಗಿದ್ದಲ್ಲಿ ಅದನ್ನು ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮವೇನು

(ಇ) ಪ್ರಸಕ್ತ ಸಾಲಿನಲ್ಲಿ ಸದರಿ ಗ್ರಾಮಕ್ಕೆ ಹೈಸ್ಕೂಲ್ ಮಂಜೂರು ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು)

ಅ) ಬಂದಿದೆ

ಆ) ಮತ್ತು ಇ) 1999-2000ನೇ ಸಾಲಿನಲ್ಲಿ ಯಾವುದೇ ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ತೆರೆಯಲು ನಿರ್ಧರಿಸಿಲ್ಲ. ನಿರ್ಧರಿಸಿದಲ್ಲಿ ಸದರಿ ಗ್ರಾಮಕ್ಕೂ ಸರ್ಕಾರಿ ಪ್ರೌಢ ಶಾಲೆ ತೆರೆಯುವ ಬಗ್ಗೆ ಪರಿಗಣಿಸಲಾಗುವುದು.

ವಿಷಯ : ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಡೊನೇಷನ್ ಹಾವಳಿ

1047(1511)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಖಾಸಗಿ ಸಂಘ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪ್ರಸಕ್ತ ವರ್ಷ ಮಕ್ಕಳ ಪ್ರವೇಶಕ್ಕೆ ಹೆಚ್ಚಿನ ಡೊನೇಷನ್ ಕೇಳುತ್ತಿರುವುದು ಹಾಗೂ ಪಾಲಕರು ಇದರಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ